INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-6, Issue -1, January-February, 2024,
PageNo,41- 47
Peer -Reviewed, Refereed Journal

# ಪಾರಂಪರಿಕ ಕಟ್ಟಡಗಳಲ್ಲಿ ಮಹಾರಾಜ ಕಾಲೇಜು ಬೆಳೆದು ಬಂದ ಹಿನ್ನಲೆ

* ರಮೇಶ.[1]
**ಡಾ.ರಮೇಶ.ವಿ.ಎಂ.[2]

ಮೈಸೂರು ಮಹಾರಾಜರು ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಶಿಕ್ಷಣದ ಹಿನ್ನಲೆಯನ್ನು ಗಮನಿಸಿದರೆ ಯಾವುದೇ ಒಂದು ನಾಡಿನ, ರಾಷ್ಟ್ರದ ಅಭಿವೃದ್ದಿಯನ್ನು ವ್ಯಕ್ತಪಡಿಸುವುದು ಶಿಕ್ಷಣ ಮತ್ತು ಸಾಕ್ಷರತೆ, ಸಾಕ್ಷರತೆಯನ್ನು ಆಧುನಿಕರಣದ ಹರಿಕಾರ ಎಂದು ಹೇಳಬಹುದಾಗಿದೆ. ಅಮರ್ತ್ಯಸೇನ್ ಪ್ರಕಾರ ಸಾಕ್ಷರತೆಯು ಅಭಿವೃದ್ಧಿಯ ಸಾಧನವೂ ಹೌದು ಮತ್ತು ಸಾರ್ಥಕವು ಹೌದು. ಶಿಕ್ಷಣ ಮತ್ತು ಸಾಕ್ಷರತೆಗೆ ಅಂತಸತ್ವವಾದ ಗುಣವಿದೆ. ಅಭಿವೃದ್ಧಿಯ ಅಭಿವ್ಯಕ್ತವಾಗುವ ಪರಿಯೇ ಸಾಕ್ಷರತೆ. ಮನುಷ್ಯನ ಧಾರಣ ಶಕ್ತಿಯನ್ನು ಒದಗಿಸುವ ಒಂದು ಶಕ್ತಿಯೇ ಸಾಕ್ಷರತೆ. ಮನುಷ್ಯನ ಸಾಕ್ಷರತೆಯ ವೈಪಲ್ಯವನ್ನು ಅಭಿವೃದ್ಧಿಯ ವೈಪಲ್ಯವೆಂದೇ ಪರಿಗಣಿಸಿದ್ದಾರೆ. ಆದರೆ ಮೈಸೂರು ಸಂಸ್ಥಾನದ ಮಹಾರಾಜರು ತನ್ನ ಆಳ್ವಿಕೆಯ ಕಾಲದಲ್ಲಿ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಕರ್ನಾಟಕದ ಇತಿಹಾಸದಲ್ಲಿಯೂ ಅಗ್ರಹಾರ, ಮಠ ಮತ್ತು ಘಟಿಕಸ್ಥಾನಗಳೆಂಬ ವಿದ್ಯಾಸಂಸ್ಥೆಗಳು ಹರಡಿಕೊಂಡಿದ್ದವು. ಅಗ್ರಹಾರವೆಂದರೆ ಬ್ರಾಹ್ಮಣರು, ಪಂಡಿತರು ವಾಸಿಸುತ್ತಿದ್ದ ಗ್ರಾಮ. ತಮ್ಮ ಜ್ಞಾನಾನ್ವೇಷಣೆಯಲ್ಲಿ ನಿರಂತರವಾಗಿ ನಿರತರಾಗಲು ಅನುಕೂಲವಾಗುವಂತೆ ಭೂಮಿ, ವಸತಿ, ಮೊದಲಾದ ಸೌಕರ್ಯಗಳನ್ನು ಅವರಿಗೆ ಒದಗಿಸಲಾಗುತ್ತಿತ್ತು. ಪ್ರತಿಯೊಂದು ಅಗ್ರಹಾರದಲ್ಲಿಯೂ ಒಂದು ಪ್ರಾಥಮಿಕ ಶಾಲೆಯಿದ್ದು, ಅಲ್ಲಿ ಒಬ್ಬ ಪಂಡಿತರು ಇರುತ್ತಿದ್ದರು. ಆತನು ನೀಡುತ್ತಿದ್ದ ಬಾಲಶಿಕ್ಷಣ ಅಥವಾ ಕನ್ನಡ ಶಿಕ್ಷಣಕ್ಕೆ ಪ್ರತಿಫಲವಾಗಿ ಅವನಿಗೆ ಭೂಮಿಯನ್ನು ಕೊಡಲಾಗುತ್ತಿತ್ತು. ಇವರನ್ನು ಕನ್ನಡ ಪಂಡಿತರೆಂದೇ ಕರೆಯಲಾಗುತ್ತಿತ್ತು. ಅಂದಿನ ಕಾಲಕ್ಕೆ ದೇವಸ್ಥಾನಕ್ಕೆ ಸೇರಿದಂತೆ ಮಠಗಳಿದ್ದವು. ಈ ಮಠಗಳಲ್ಲಿ ವಸತಿ ಸೌಕರ್ಯ ಮತ್ತು ಊಟದ ಸೌಕರ್ಯಯಗಳಿದ್ದು ಈ ಮಠಗಳು ವಿದ್ಯಾಕೇಂದ್ರಗಳಾಗಿದ್ದವು. ಉದಾಹರಣೆಗೆ:- ಪ್ರಾಚೀನ ಕಾಲದ ಭೌದ್ಧ ವಿಹಾರಗಳಲ್ಲಿ ಅನುಕರಣೆಯಿದ್ದಿರಬಹುದೆಂದು ಹೇಳಲಾಗಿದೆ.

[1].ಸಂಶೋಧನಾ ವಿದ್ಯಾರ್ಥಿ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು.

2.ಸಹಾಯಕ ಪ್ರಾಧ್ಯಾಪಕರು,ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,ಮುಕ್ತ ಗಂಗೋತ್ರಿ, ಮೈಸೂರು.

ಘಟಿಕಾಸ್ಥಾನಗಳು ವಿದ್ವಾಂಸರ ವಿದ್ವತ್ತನ್ನು ಪರೀಕ್ಷಿಸುವ ಕೇಂದ್ರಗಳಾಗಿದ್ದವು. ಈ ಮಾದರಿಯ ಅಧ್ಯಯನಗಳನ್ನು ಗಮನಿಸಿದರೆ ಮೈಸೂರು ಒಡೆಯರ ಕಾಲದಲ್ಲಿಯೂ ಇತ್ತೆಂದು ತಿಳಿಯಬಹುದಾದರೂ ಕೂಡ ಮೈಸೂರು ನಗರದಲ್ಲಿಯೂ ಅಗ್ರಹಾರಗಳು ಮತ್ತು ಮಠಗಳನ್ನು ಸಾಕಷ್ಟು ಕಾಣಬಹುದಾಗಿದೆ.

ಮೈಸೂರಿನಲ್ಲಿ ಮುಸಲ್ಮಾನರ ಆಡಳಿತ ಪ್ರಬಲವಾಗಿದ್ದಾಗ (1761–1799) ಈ ಅವಧಿಯಲ್ಲಿ ಹೈದರ ಅಲಿ ಮತ್ತು ಟಿಪ್ಪುಸುಲ್ತಾನ್ ಕಾಲದಲ್ಲಿ ಮುಸಲ್ಮಾನರ ಶಿಕ್ಷಣಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯಿತು. ಕಾಲಾನಂತರ ಸರ್ಕಾರವು ಸರ್ವರೂ ಹೊಂದುವಂತಹ ಶಿಕ್ಷಣ ಪದ್ಧತಿಯನ್ನು ರೂಪಿಸಿದ ಕಾಲದಲ್ಲಿ ಪ್ರತ್ಯೇಕವಾಗಿ ಉರ್ದುಶಾಲೆಗಳು ಸ್ಥಾಪಿತವಾಗಿ ಸರ್ಕಾರವು ಅವುಗಳನ್ನು ನಡೆಸುತ್ತಿತ್ತು.

1833ರವರೆಗೆ ರಾಜ್ಯದಲ್ಲಿ ಶಿಕ್ಷಣವನ್ನು ಧಾರ್ಮಿಕ ನಾಯಕರೇ ನೋಡಿಕೊಳ್ಳುತ್ತಿದ್ದರು. 1833ರ ಅಂದಿನ ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಮೈಸೂರು ನಗರದಲ್ಲಿ ಒಂದು ಆಂಗ್ಲ ಭಾಷಾ ಶಾಲೆಯನ್ನು ಸ್ಥಾಪಿಸಿದರು. ಅಲ್ಲಿ ಶಿಕ್ಷಣವು ಉಚಿತವಾಗಿತ್ತು ಸರ್ ಚಾರ್ಲ್ಸ್‌ವುಡನ ವರದಿಯ ಫಲವಾಗಿ ಭಾರತದ ಇತರ ಭಾಗಗಳಂತೆ ಕರ್ನಾಟಕದಲ್ಲಿಯೂ ಆಧುನಿಕ ಶಿಕ್ಷಣವು ವ್ಯವಸ್ಥಿತವಾಗಿ 1854ರಲ್ಲಿ ಆರಂಭವಾಯಿತು.

1854ರ ಅವಧಿಯಲ್ಲಿ ಮೈಸೂರು ಬ್ರಿಟೀಷ್ ಈಸ್ಟ ಇಂಡಿಯಾ ಕಂಪನಿಯ ನಿರ್ದೇಶಕರ ಮುಷ್ಠಿಯಲ್ಲಿತ್ತು. ಚಾರ್ಲ್ಸ್‌ವುಡನ ವರದಿಯ ಆಧಾರದ ಮೇಲೆ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ಆಧುನಿಕ ಶಿಕ್ಷಣವನ್ನು ರೂಪಿಸಿದ್ದರು. ಡೆವರಿಕ್ಸ್ ಮೈಸೂರು ರಾಜ್ಯದ ಜ್ಯುಡಿಷಿಯಲ್ ಕಮಿಷನರ್ ಆಗಿದ್ದಾಗ ಆಧುನಿಕ ಶಿಕ್ಷಣ ಯೋಜನೆಯನ್ನು ಸಿದ್ಧಪಡಿಸಿದರು. ಈ ಯೋಜನೆಯ ಪ್ರಕಾರ ಕಮಿಷನರ್ ಆಧೀನದಲ್ಲಿ ಅವರ ನೇರ ನೇತೃತ್ವದಲ್ಲಿ ಒಂದು ಇಲಾಖೆ ಇರಬೇಕೆಂದೂ ಅದರ ಮುಖ್ಯಸ್ಥರಾಗಿ ಶಿಕ್ಷಣ ನಿರ್ದೇಶಕರು ಇರತಕ್ಕದೆಂದು ಅವರಿಗೆ ಸಹಾಯಕ ಸಿಬ್ಬಂದಿಯು ಇರಬೇಕೆಂದೂ ಈ ಯೋಜನೆಯಲ್ಲಿ ವಿವರಿಸಲಾಯಿತು. 1868ರಲ್ಲಿ ಬಿ.ಎಲ್.ರೈಸ್ ರವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆರಂಭಿಸಬೇಕೆಂದನು. ಅದಕ್ಕೆ ಅವಶ್ಯಕವಾಗಿರುವ ಶಾಲಾ ಕಟ್ಟಡವನ್ನು ಪೂರೈಸಲಾಗುತ್ತದೆಂದನು.

1911–1916ರ ಅವಧಿಯಲ್ಲಿ ಶಿಕ್ಷಣದ ಇತಿಹಾಸದಲ್ಲಿ ಅನೇಕ ನೂತನ ಯೋಜನೆಗಳನ್ನು ಶಿಕ್ಷಣ ಪದ್ಧತಿಯಲ್ಲಿ, ಶಿಕ್ಷಣದ ಇತಿಹಾಸದಲ್ಲಿ ಅಳವಡಿಸಲಾಯಿತು. 1913ರಲ್ಲಿ ಮೈಸೂರು ಸಂಸ್ಥಾನವು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿತು. ಬರೋಡ ಸಂಸ್ಥಾನದ ನಂತರ ಕಡ್ಡಾಯ ಶಿಕ್ಷಣವನ್ನು ಆರಂಭಿಸಿದ ದೇಶಿಯ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನವು ಎರಡನೆಯದು. 1913ರ ಮೈಸೂರು ಪ್ರಾಥಮಿಕ ಶಿಕ್ಷಣ ನಿಬಂಧನೆಯು ಸಾರ್ವತ್ರಿಕ ಕಡ್ಡಾಯ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟಿತು. ಇದೇ ಅವಧಿಯಲ್ಲಿ

ಭಾರತದಲ್ಲಿ ಬೇರೆ ಬೇರೆ ರಾಜ್ಯಗಳು ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟನ್ನು ಜಾರಿಗೆ ತಂದವು. ಈ ಕ್ರಮವನ್ನೆ ಅನುಸರಿಸಿ ಮೈಸೂರು ರಾಜ್ಯದಲ್ಲಿಯೂ ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ ಪದ್ಧತಿಯನ್ನು 1913ರಲ್ಲಿ ಜಾರಿಗೆ ತರಲಾಯಿತು.

1399 ರಿಂದ 1947ರವರೆಗೆ ಸುಮಾರು ಐದುವರೆ ಶತಮಾನಗಳು ಮೈಸೂರು ರಾಜಮನೆತನದ ಸುಮಾರು 25 ರಾಜರು ಆಳ್ವಿಕೆ ನಡೆಸಿದ್ದಾರೆ. ಅದು ಭಾರತದ ಇತಿಹಾಸದಲ್ಲಿ ಒಂದು ಪ್ರಮುಖವಾದ ವಿಚಾರವಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಮೈಸೂರು ಒಡೆಯರು ನೀಡಿರುವ ಕೊಡುಗೆ ಅಪಾರವಾದದ್ದು ಅದರಲ್ಲೂ 1800 ರಿಂದ 1947 ರವರೆಗೆ ಆಡಳಿತ ನಡೆಸಿರುವ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್, ಹತ್ತನೇ ಚಾಮರಾಜೇಂದ್ರ ಒಡೆಯರ್ , ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜ ಒಡೆಯರ್ ಇವರುಗಳ ಕಾಲದ ಶೈಕ್ಷಣಿಕ ಪ್ರಯೋಗಗಳು ಹಾಗೂ ಸುಧಾರಣೆಗಳು, ಒಂದೆರಡು ಮಹಾ ಪ್ರಬಂಧಗಳ ರಚನೆಗೆ ಸಾಕಾಗುವಷ್ಟು ಮಾಹಿತಿಗಳನ್ನು ಒದಗಿಸುತ್ತದೆ. ಮೈಸೂರಿನ ಒಡೆಯರುಗಳ ಸಂಸ್ಥಾನದ ಪ್ರಜೆಗಳ ಬಗ್ಗೆ ಹೊಂದಿದ್ದ ಕಾಳಜಿ ಹಾಗೂ ಬದ್ಧತೆಯ ಪರಿಣಾಮವಾಗಿ ಶೈಕ್ಷಣಿಕವಾಗಿ ಅವರು ಅಭಿವೃದ್ಧಿ ಹೊಂದಿದ ಮೇಲೆ ಉದ್ಯೋಗ ಜಾರಿಗೊಳಿಸಿದ ಹಲವಾರು ಕ್ರಮಗಳನ್ನು ಶೈಕ್ಷಣಿಕ ಹಿನ್ನಲೆಯಿಂದ ಗಮನಿಸಬಹುದಾಗಿದೆ.

ಮೈಸೂರಿನಲ್ಲಿರುವ ವಿಭಾಗೀಯ ಪತ್ರಾಗಾರದಲ್ಲಿರುವ The Mysore Administration Proceeding of the Mysore representative Assembly Karnataka State Gazetteers Speeches of the Maharajas (Krishnaraja Wodeyar IV, and Jaya Chamaraja Wodeyar). Speeches of the Dewans of Mysore ಮುಂತಾದವು ಮೈಸೂರು ಅರಸರ ಇತಿಹಾಸ ತಿಳಿದುಕೊಳ್ಳಲು ಸಹಾಯಕವಾಗಿದೆ. ಯದುರಾಯ, ಕೃಷ್ಣರಾಯ ಸಹೋದರರಿಂದ ಕ್ರಿ.ಶ. 1399ರಲ್ಲಿ ಒಡೆಯರ ಮನೆತನದ ಆಳ್ವಿಕೆ ಪ್ರಾರಂಭವಾಯಿತು. 1399 ರಿಂದ 1799ರ ವರೆಗೆ ಅಂದರೆ ಟಿಪ್ಪು ಸುಲ್ತಾನನ ಆಳ್ವಿಕೆಯ ಅಂತ್ಯದವರೆಗೆ ಮೈಸೂರು ಸಂಸ್ಥಾನದ ಶೈಕ್ಷಣಿಕ ಕೊಡುಗೆಗಳನ್ನು ಗಮನಿಸಬಹುದಾಗಿದೆ ಟಿಪ್ಪುಸುಲ್ತಾನ್‌ನ ಅಂತ್ಯದವರೆಗೆ ಮೈಸೂರು ಸಂಸ್ಥಾನದ ಶೈಕ್ಷಣಿಕ ಇತಿಹಾಸವನ್ನು ಅಧ್ಯಯನದ ಅನುಕೂಲದ ದೃಷ್ಠಿ ಉದ್ದೇಶದಿಂದ ಒಂದು ಕಾಲ ಘಟ್ಟವನ್ನಾಗಿ ರೂಪಿಸಬಹುದಾಗಿದೆ. ಆ ಕಾಲಕ್ಕಾಗಲೇ ಕರ್ನಾಟಕ ಪ್ರದೇಶದ ಇತರ ಭಾಗಗಳಲ್ಲಿದ್ದಂತೆಯೇ ಸಾಂಪ್ರದಾಯಿಕ ಶಿಕ್ಷಣ ಪದ್ಧತಿ ಜಾರಿಯಲ್ಲಿತ್ತು. ಅಂದರೆ ದೇವಾಲಯಗಳು, ಮಠಗಳು, ಛತ್ರಗಳು (ಅನ್ನ ಛತ್ರಗಳು) ಬ್ರಹ್ಮಪುರಿ, ಘಟಿಕಾಸ್ಥಾನ, ಅಗ್ರಹಾರ ಮುಂತಾದವು ಸಾಂಪ್ರದಾಯಿಕ ಶಿಕ್ಷಣವನ್ನು ನೀಡಲಾಗುತ್ತಿತ್ತು. ಅಲ್ಲದೆ ಈ ಸಂದರ್ಭದಲ್ಲಿ (ಹೈದರ್ – ಟಿಪ್ಪುಸುಲಾನ್) ಆ ವರ್ಗದವರ ಶಿಕ್ಷಣಾಕ್ಕಾಗಿ ಮಕ್ತಾಬ್, (ಪ್ರಾಥಮಿಕ ಶಿಕ್ಷಣ

ಕೇಂದ್ರಗಳು ಮತ್ತು ಮದ್ರಸಾ (ಉನ್ನತ ಶಿಕ್ಷಣದ ಕೇಂದ್ರಗಳು)ಗಳನ್ನು ಸ್ಥಾಪಿಸಲಾಯಿತು. ಅದರಲ್ಲಿ ಮೈಸೂರಿನಲ್ಲಿರುವ ಮಹಾರಾಜ ಕಾಲೇಜು ಸಹ ಒಂದಾಗಿದೆ. ಮಹಾರಾಜ ಕಾಲೇಜು ಶಂಕು ಸ್ಥಾಪನೆಯನ್ನು ಅಂದಿನ ಬ್ರಿಟನ್ನಿನ ರಾಜ ಕುಮಾರರಾದ ಆಲ್ಬರ್ಟರವರು 27–11–1899ರಲ್ಲಿ ನೆರವೇರಿಸಿದರು ಎಂಬ ಹೇಳಿಕೆಗಳಿವೆ.

ಶತಮಾನ ಪೂರೈಸಿರುವ ಮೈಸೂರಿನ ಮಹಾರಾಜ ಕಾಲೇಜು ಇಂಡೋ–ಸಾರ್ಸನಿಕ್ ಶೈಲಿಯಲ್ಲಿ ನಿರ್ಮಿಸಲಾಗಿರುವ ಒಂದು ವಿಶೇಷ ಕಟ್ಟಡವನ್ನು ಹೊಂದಿರುವ ಕಾಲೇಜು ಆಗಿದೆ. ಈ ಕಾಲೇಜಿನಲ್ಲಿ ಸುಮಾರು ನೂರು ವರ್ಷಗಳ ಹಿಂದಿನಿಂದಲೂ ಜ್ಞಾನದಾಹಿಗಳಿಗೆ ನಿರಂತರವಾಗಿ ಜ್ಞಾನದಾಸೋಹ ಉಣ ಬಡಿಸಲಾಗುತ್ತಿದೆ. ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಲಕ್ಷಾಂತರ ವಿದ್ಯಾರ್ಥಿಗಳು ಪ್ರಪಂಚದ ಮೂಲೆ ಮೂಲೆಗಳಲ್ಲಿ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಪ್ರಸ್ತುತ ಸುಮಾರು 3500ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಕಾಲೇಜು ಮೈಸೂರು ಒಡೆಯರವರಿಂದ ನಿರ್ಮಾಣಗೊಂಡಿದೆ. ಕಮಾನುಗಳುಳ್ಳ ಗವಾಕ್ಷಿಗಳು ಮನ್ಸರ್ಡ್ ರೀತಿಯ ಮಧ್ಯದ ಮೇಲ್ಛಾವಣಿ ಮತ್ತು ಉಪನ್ಯಾಸ ಕೊಠಡಿಗಳಿರುವ ಟಸ್ಕನ್ ಸ್ಥಂಭಗಳು ಭವ್ಯವಾಗಿದೆ. ಮುಂಭಾಗದಲ್ಲಿರುವ ಸಿಂಹ ಸ್ತಂಭ ವೈಶಿಷ್ಟ್ಯ ಪೂರ್ಣವಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು 1833ರಲಿ ರಾಜಾಸ್ ಇಂಗ್ಲೀಷ್ ಫ್ರೀ ಸ್ಕೂಲ್ ಸ್ಥಾಪಿಸಿದರು. ಅನಂತರ 1897ರಲ್ಲಿ ಎರಡನೆಯ ಸ್ತರದ ಕಾಲೇಜನ್ನಾಗಿ ಮಾಡಲಾಯಿತು. 10ನೇ ಚಾಮರಾಜ ಒಡೆಯರ ಅವಧಿಯಲ್ಲಿ ಅಂದರೆ 1889ರಲ್ಲಿ ಈಗಿನ ಮಹಾರಾಜ ಕಾಲೇಜು ಕಟ್ಟಡ ನಿರ್ಮಾಣ ಮಾಡಲಾಯಿತು. ಹಾಗಾಗಿ ಅಂದರೆ 1894ರಲ್ಲಿ ಇದನ್ನು ಪ್ರಥಮ ದರ್ಜೆ ಕಾಲೇಜನ್ನಾಗಿ ಮಾಡಲಾಯಿತು. ಈ ಕಾಲೇಜನ್ನು ಮೈಸೂರು ವಿಶ್ವವಿದ್ಯಾನಿಲಯದ ತಾಯಿಬೇರು ಎಂದೇ ಹೇಳಬಹುದು. ಮಹಾರಾಜ ಕಾಲೇಜಿನ ಮುಂಭಾಗದ ಕಟ್ಟಡದ ಬಣ್ಣ ಮಾಸಿದೆ. ಕಾಲದಿಂದ ಕಾಲಕ್ಕೆ ಬಣ್ಣವನ್ನು ಹಾಕಲಾಗುತ್ತಿದೆ. ಈ ಕಾಲೇಜಿನ ಆಡಳಿತ ವಿಭಾಗ ಮತ್ತು ನಗದು ವಿಭಾಗದ ಕೊಠಡಿಗಳ ಮೇಲ್ಛಾವಣಿ ಶಿಥಿಲವಾಗಿದ್ದು ಮಳೆನೀರು ಸೋರಿಕೆಯಿಂದ ಗೋಡೆಯಲ್ಲಾ ವಸ್ತಿ ಹಿಡಿದಿದೆ ಜೂನಿಯರ್ ಬಿ.ಎ. ಹಾಲ್ ಕಿಟಕಿಗಳಲ್ಲಿ ಪಾಚಿ ಬೆಳೆದಿದೆ.

ಪತ್ರಿಕೋದ್ಯಮ ತರಗತಿಗಳು ನಡೆಯುವ ಕಟ್ಟಡವನ್ನು ಯೂನಿಯನ್ ಕಟ್ಟಡ ಎನ್ನಲಾಗುತ್ತಿದೆ. ಇಲ್ಲಿಯೇ ಕಂಪ್ಯೂಟರ ವಿಭಾಗ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಹಾಗೂ ವಾಚನಾಲಯವೂ ಇದೆ. ಈ ಕಟ್ಟಡದ ಮೇಲೆ ಗಿಡ ಗಂಟೆಗಳು ಬೆಳೆದಿವೆ. ಮಳೆ ಬಂದಾಗ ನೀರು ಸೋರಿಕೆಯಾಗಿ ತರಗತಿಯ ಒಳಗೆಲ್ಲ ನೀರು ನಿಲ್ಲುತ್ತದೆ, ಮೇಲ್ಛಾವಣಿ ಕುಸಿದಿತ್ತು. ಎರಡು ವರ್ಷಗಳ ಹಿಂದೆ ಮಹಾರಾಜ ಕಾಲೇಜಿನ ಆವರಣದಲ್ಲಿ ಕ್ರಿಮಿನಾಲಜಿ ತರಗತಿಗಳು ನಡೆಯುವ ಕೊಠಡಿಯೊಂದರ

ಮೇಲ್ಛಾವಣಿ ಕುಸಿದು ಬಿದ್ದು ಇಬ್ಬರು ವಿದ್ಯಾರ್ಥಿಗಳಿಗೆ ಸಣ್ಣ ಪ್ರಮಾಣದ ಗಾಯಗಳಾಗಿತ್ತು ಎಂದು ಕಾಲೇಜಿನ ಹೇಳಿಕೆಗಳಿವೆ. ಮಹಾರಾಜ ಕಾಲೇಜಿನಲ್ಲಿ ಓದಿದ ಪ್ರಮುಖರೆಂದರೆ ಕುವೆಂಪು, ಜಿ. ಎಸ್.ಶಿವರುದ್ರಪ್ಪ, ಆರ್.ಕೆ.ನಾರಾಯಣ, ಆರ್.ಕೆ. ಲಕ್ಷ್ಮಣ್, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ದೇವನೂರು ಮಹಾದೇವ, ಶ್ರೀ ಕಂಠದತ್ತ ನರಸಿಂಹ ರಾಜ ಒಡೆಯರ್, ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಶ್ರೀ ಕೃಷ್ಣ ಆಲನಹಳ್ಳಿ, ಮಾಜಿ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ, ಕಡಿದಾಲ್ ಮಂಜಪ್ಪ, ಎಸ್ ಬಂಗಾರಪ್ಪ, ಜೆ.ಹೆಚ್, ಪಟೇಲ್, ಎಸ್.ಎಂ. ಕೃಷ್ಣ ಇನ್ನು ಮೊದಲಾದವರು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪ್ರಸಿದ್ಧರಾಗಿದ್ದಾರೆ.

1853ರ ಸಂದರ್ಭದಲ್ಲಿ ಆರಂಭವಾದ ಮೈಸೂರಿನ ಮಹಾರಾಜ ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಸರ್ವರೀತಿಯಿಂದಲೂ ಆಯಾ ಸಂದರ್ಭದಲ್ಲಿ ಸಹಾಯ ಹಸ್ತವನ್ನು ನೀಡಿರುವವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ರವರು. ಅದು ಅಲ್ಲದೆ ಅದರ ಆರಂಭಕ್ಕೆ ಸತತವಾಗಿ ದುಡಿದ ಅಂದಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು 1916ರಲ್ಲಿ ಮೈಸೂರು ಸಂಸ್ಥಾನದಲ್ಲೇ ಮೊಟ್ಟ ಮೊದಲನೆಯದಾಗಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರಿನ ಮಹಾರಾಜ ಕಾಲೇಜು ಹಾಗೂ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಕೇಂದ್ರ ಸಂಸ್ಥೆಗಳಾದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲನೆ ಕುಲಪತಿಗಳಾಗಿ ಎಚ್.ವಿ. ನಂಜುಂಡಯ್ಯನವರು 1916 ರಿಂದ 1919ರವರೆಗೆ ಸೇವೆ ಸಲ್ಲಿಸಿದ್ದಾರೆ.

ಮಹಾರಾಜ ಕಾಲೇಜು 1833ರಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಮೈಸೂರು ಚರ್ಚ್ ರಸ್ತೆಯ ಕಟ್ಟದವೊಂದರಲ್ಲಿ ಆರಂಭವಾಯಿತು. 1868ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಮರಣ ಹೊಂದಿದ ತದನಂತರ ಸರ್ಕಾರಕ್ಕೆ ಸೇರಲ್ಪಟ್ಟ ಮಹಾರಾಜರ ಪಾಠ ಶಾಲೆಯೆಂದು ಕರೆಯಲಾಗಿತ್ತು. ಇದು ತುಂಬಾನೇ ವರ್ಷಗಳ ಕಾಲ ವಿಶ್ವವಿದ್ಯಾನಿಲಯಕ್ಕೆ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳ ತರಬೇತಿ ಕೇಂದ್ರವಾಗಿತ್ತು 1879ರಲ್ಲಿ ಎರಡನೆಯ ದರ್ಜೆಯ ಕಾಲೇಜ್ ಆಗಿ ಮದ್ರಾಸ್ ವಿಶ್ವವಿದ್ಯಾಲಯದ ಸದಸ್ಯತ್ವ ಪಡೆಯಿತು. 1894ರಲ್ಲಿ ಪ್ರಥಮ ದರ್ಜೆಗೆ ಏರಿಸಲ್ಪಟ್ಟಿತು. 1916ರಲ್ಲಿ ಮೈಸೂರು ಸಂಸ್ಥಾನದ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ನಂತರ ಅದರ ವ್ಯಾಪ್ತಿಗೊಳಪಟ್ಟಿತು. ಈ ಮಹಾರಾಜ ಕಾಲೇಜಿನಲ್ಲಿ ಸಾಕಷ್ಟು ಪದವಿಗಳಿವೆ. ಒಟ್ಟಾರೆ ಮೈಸೂರು ಮಹಾರಾಜ ಕಾಲೇಜು ಒಂದು ಪಾರಂಪರಿಕ ಕಟ್ಟಡವಾಗಿದ್ದು ತನ್ನದೇ ಆದ ಇತಿಹಾಸವನ್ನು ಪಡೆದು ಕೊಂಡಿದೆ ಎಂದು ತಿಳಿಯಬಹುದಾಗಿದೆ.

19ನೇ ಶತಮಾನದ ಆದಿ ಭಾಗದಿಂದ ಸಾರ್ವಜನಿಕ ಶಿಕ್ಷಣ ಚಟುವಟಿಕೆಗಳು ಬೆಳೆದರೂ ವಿದ್ಯಾಕೇಂದ್ರದೊಂದಿಗೆ ಗ್ರಂಥಾಲಯಗಳ ಅಭಿವೃದ್ಧಿ ವ್ಯವಸ್ಥಿತವಾಗಿ ಅಭಿವೃದ್ಧಿಯಾಗಿರಲಿಲ್ಲ. ಅಂದಿನ

ಕಾಲಕ್ಕೆ ಗ್ರಂಥಾಲಯಗಳ ಮಹತ್ವವನ್ನು ಅರಿತುಕೊಂಡಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು 1913ರಲ್ಲಿ ರಾಜ್ಯದ ರಚನಾತ್ಮಕವಾಗಿ ಗ್ರಂಥಾಲಯ ಚಳುವಳಿಯನ್ನು ಪ್ರಾರಂಭಿಸಿದರು. ಹಾಗೂ ಶಿಕ್ಷಣ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರದ ಗಮನಕ್ಕೆ ತಂದರು. 1914ರ ಜುಲೈ 20ರಂದು ಮೈಸೂರು ಸಂಸ್ಥಾನದ ಯುವ ರಾಜರಾಗಿದ್ದ ನರಸಿಂಹರಾಜ ಒಡೆಯರಿಂದ ಮೈಸೂರು ನಗರದ ಪ್ರಥಮ ಗ್ರಂಥಾಲಯದ ಪ್ರಾರಂಭೋತ್ಸವ ಜರುಗಿತು. ಮೈಸೂರು ಮಹಾರಾಜ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಗ್ರಂಥಾಲಯಗಳು ಬೆಳೆದು ಉನ್ನತ ಶಿಕ್ಷಣದ ಸಾಧನೆಯಲ್ಲಿ ಗ್ರಂಥಗಳ ಅವಶ್ಯಕತೆಯನ್ನು ಪೂರೈಸುವ ಸಂಸ್ಥೆಗಳಾಗಿ ರೂಪುಗೊಂಡವು. ಈ ಹಿನ್ನಲೆಯಿಂದ ಮಹಾರಾಜ ಕಾಲೇಜಿನ ಆವರಣದಲ್ಲಿ ಗ್ರಂಥಾಲಯ ಸ್ಥಾಪನೆಯಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರವರು ಮೈಸೂರು ಸಂಸ್ಥಾನದ ಇಪ್ಪತ್ತನಾಲ್ಕನೆಯ ಅರಸರುಗಳು (ಕ್ರಿ.ಶ. 1884–1940) ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವೆಂದು ಹೆಸರನ್ನು ತಂದ ಕೊಟ್ಟ ಕೀರ್ತಿ ಇವರಿಗೆ ಸಲ್ಲಬೇಕು. ಇವರು ಉತ್ತಮ ರಾಜನೀತಿಜ್ಞರೂ, ವಿದ್ಯಾಪಕ್ಷ ಪಾತಿಗಳು, ಕಲಾಭಿಮಾನಿಗಳೂ ಮತ್ತು ಪ್ರಜಾಹಿತಾಕಾಂಕ್ಷಿಗಳು ಸಹ ಆಗಿದ್ದರು. ಆದುದರಿಂದಲೇ ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಪಾಠ ವೇದಗಳ ಅಧ್ಯಯನಗಳನ್ನು ಬೋಧಿಸುವ ಪ್ರಯತ್ನ ಮಾಡಿದ್ದಾರೆ. 1894ರಲ್ಲಿ ಮಹಾರಾಜ ಕಾಲೇಜು ಪ್ರಥಮ ದರ್ಜೆ ಕಾಲೇಜಾಗಿ ಮೇಲ್ದರ್ಜೆಗೇರಿತು. ಪ್ರಥಮ ದರ್ಜೆ ಕಾಲೇಜಾದಾಗ ಮಹಾರಾಜ ಕಾಲೇಜಿನಲ್ಲಿ 93 ವಿದ್ಯಾರ್ಥಿಗಳಿದ್ದರು. ಅವರಲ್ಲಿ 17 ಬಿ.ಎ. ಜೂನಿಯರ್ ತರಗತಿ ವಿದ್ಯಾರ್ಥಿಗಳು, 20 ಜೂನಿಯರ್ ಎಫ್.ಎ. (First in Arts) ತರಗತಿ ಹಾಗೂ 56 ಸಿನಿಯರ್ ಎಫ್.ಎ. ತರಗತಿ ವಿದ್ಯಾರ್ಥಿಗಳಿದ್ದರು. ಬಿ.ಎ. ಪದವಿ ಪರೀಕ್ಷೆಗಾಗಿ ಈ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳನ್ನು ಮದ್ರಾಸ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಲಾಯಿತು. 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದ ನಂತರ ಇದೇ ವಿಶ್ವವಿದ್ಯಾನಿಲಯಕ್ಕೆ ಸೇರಿಸಿ ಬಿ.ಎ. (ಆನರ್ಸ್) ಮತ್ತು ಎಂ.ಎ. ತರಗತಿಗಳನ್ನು ತೆರೆಯಲಾಯಿತು. ಇಂತಹ ಇತಿಹಾಸ ಹೊಂದಿರುವ ಮಹಾರಾಜ ಕಾಲೇಜು ತನ್ನದೇ ಆದ ಗತ ಕಾಲದ ಪಾರಂಪಾರಿಕ ಕಟ್ಟಡವಾಗಿರುವುದರಿಂದ ನಾವು ಉತ್ತಮ ರೀತಿಯಲ್ಲಿ ಉಳಿಸಿಕೊಳ್ಳಬೇಕಾಗಿದೆ.

## ಪರಾಮರ್ಶನ ಗ್ರಂಥಗಳು

1.ಡಾ.ಚಂದ್ರಶೇಖರ್.ಟಿ.ಆರ್–ಕರ್ನಾಟಕ ಅಭಿವೃದ್ಧಿಯ ನೆಲೆಗಳು,ಸಿ.ವಿ.ಜಿ.ಪಬ್ಲಿಕೇಷನ್,ಬೆಂಗಳೂರು–1999

2. ಡಾ.ಸೂರ್ಯನಾಥ ಕಾಮತ್–ಮೈಸೂರು ಸ್ಟೇಟ್ ಗ್ಯಾಜೆಟೀಯರ್, 1969

3. ಮೈಸೂರು ಸ್ಟೇಟ್ ಗ್ಯಾಜೆಟೀಯರ್, –1969

4. ಸೂರ್ಯನಾಥ ಕಾಮತ್–ಮೈಸೂರು ಸ್ಟೇಟ್ ಗ್ಯಾಜೆಟೀಯರ್, 1986

5.ಪ್ರೊ.ಡಿ.ಕೆ.ರಾಜೇಂದ್ರ–(ಸಂ) ಮೈಸೂರು ದರ್ಶನ ಸಂಪುಟ–1,ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ ಮೈಸೂರು – 2011

6.ಪಿ.ವಿ.ನಂಜರಾಜಅರಸ–ಮೈಸೂರು ನೂರಿನ್ನೂರು ವರ್ಷಗಳ ಹಿಂದೆ,ಅಭಿವೃದ್ಧಿ ಪ್ರಕಾಶನ ಸರಸ್ವತಿಪುರಂ–2007

7. Suryanatha V Kamath (ED) -Ibid P - 591 (1988)